ಅ) ಈಗಾಗಲೇ ಜಿಲ್ಲಾ ಪಂಚಾಯಿತಿಯಿಂದ ಮಾಡಲಾಗಿರುವ ತನಿಖೆ ಪ್ರಕಾರ ಮೇಲ್ನೋಟಕ್ಕೆ ಐದು ಜನ ಇಂಜಿನಿಯರ್‌ಗಳು ಭಾಗಿಗಳಾಗಿದ್ದಾರೆಂದು ಕಂಡುಬಂದಿದೆ. ಇವರುಗಳ ಮೇಲಿನ ಆರೋಪಗಳ ಬಗ್ಗೆ ಜಂಟಿ ಇಲಾಖಾ ವಿಚಾರಣೆ ನಡೆಸಲು ಉಡುಪಿ ಜಿಲ್ಲಾಧಿಕಾರಿಯವರನ್ನು ದಿನಾಂಕ 11.02.03 ರಂದು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದೆ.

ಇದಲ್ಲದೆ ಉಡುಪಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ : ಉಪ ವಿಭಾಗದ ಅಕ್ರಮಗಳ ಬಗ್ಗೆ ಪೂರ್ವಭಾವಿ ತನಿಖೆ ನಡೆಸಿ, ವರದಿ ಸಲ್ಲಿಸಲು ದಿನಾಂಕ 17.6.02 ರಂದು ಮಾನ್ಯ ಲೋಕಾಯುಕ್ತರನ್ನು ಕೋರಿದೆ.

ಇ) ಹೌದು

ಈ) ಜಿಲ್ಲಾ ಪಂಚಾಯತಿಯು ಪರಿಶೀಲಿಸಲಾಗಿರುವ 52 ಕಾಮಗಾರಿಗಳಲ್ಲಿ ರೂ. 15,36,104.00 ದುರುಪಯೋಗವಾಗಿರಬಹುದೆಂದು ಮೇಲ್ನೋಟಕ್ಕೆ ಕಂಡುಬಂದಿದೆ. ತನಿಖೆಯು ಮುಂದುವರಿಯುತ್ತಿದೆ.

ಉ) ವಿಚಾರಣಾ ವರದಿ ಹಾಗೂ ಲೋಕಾಯುಕ್ತರ ವರದಿ ಬಂದ ನಂತರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಪಿ.ಯು.ಸಿ ತರಗತಿಗಳಿಗೆ ಸಿ.ಇ.ಟಿ. ಮಾದರಿ ಪ್ರವೇಶ

326 (490) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) - ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಿ.ಯು.ಸಿ. ಪದವಿ ತರಗತಿಗಳಿಗೆ ಪ್ರವೇಶ ನೀಡುವಾಗ ಸಿ.ಇ.ಟಿ. ಅಳವಡಿಸುವ ಪ್ರಸ್ತಾವನೆ ಇದೆಯೇ ;

ಆ) ಇದರ ಸಾಧಕ ಬಾಧಕಗಳ ಸಮಗ್ರ ಅಧ್ಯಯನ ನಡೆಯಲಾಗಿದೆಯೇ ;

ಇ) ಆರಂಭದಲ್ಲಿ ಯಾವ ಜಿಲ್ಲೆಯಲ್ಲಿ ಇದನ್ನು ಜಾರಿಗೆ ತರಲಾಗುವುದು ?

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಇಲ್ಲ

ಆ)ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಗೃಹ ಮಂಡಳಿಯಿಂದ ನಿವೇಶನಗಳ ಹಂಚಿಕೆ

327 (491) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) - ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ವಸತಿ ಯೋಜನೆಯಡಿ ಎಷ್ಟು ನಿವೇಶನಗಳನ್ನು ವಿತರಿಸಲು ಗುರಿ ನಿಗಧಿಪಡಿಸಲಾಗಿದೆ (ಜಿಲ್ಲಾವಾರು ವಿವರ ಒದಗಿಸಿ) ;

ಆ) ಗೃಹ ಮಂಡಳಿಗೆ ಈಗಾಗಲೇ ನಿವೇಶನ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ) ;

ಇ) ಇವರುಗಳಿಗೆ ಯಾವಾಗ ನಿವೇಶನ ಅಥವಾ ಮನೆ ಮಂಜೂರು ಮಾಡಲಾಗುವುದು;

ಈ) ರಾಜ್ಯದಲ್ಲಿ ಪ್ರಸ್ತುತ ಎಷ್ಟು ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ;

ಉ) ಇವುಗಳ ಮಂಜೂರಾತಿ ಕಾರ್ಯವನ್ನು ಪ್ರಾರಂಭಿಸಲಾಗುವುದು ;

ಊ) ಮಾದರಿ ಮನೆಯನ್ನು ನಿರ್ಮಿಸಿ ಅದನ್ನು ಸಾರ್ವಜನಿಕರಿಗೆ ತೋರಿಸುವ ಯೋಜನೆಯನ್ನು ಅನುಸರಿಸಲಾಗುವುದೇ ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು)

ಅ) ರಾಜ್ಯದಲ್ಲಿ ಗೃಹ ಮಂಡಳಿಯ ವಸತಿ ಯೋಜನೆಯಡಿ ಸುಮಾರು 25158 ನಿವೇಶನಗಳನ್ನು ವಿತರಿಸಲು ಗುರಿ ನಿಗಧಿಪಡಿಸಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ)

ಆ) 28353 ಅರ್ಜಿಗಳು (ಜಿಲ್ಲಾವಾರು ವಿವರಗಳನ್ನು ಅನುಬಂಧ 2 ರಲ್ಲಿ ನೀಡಲಾಗಿದೆ).

ಇ) ನಿವೇಶನ ಅಥವಾ ಮನೆಯನ್ನು ಯೋಜನೆಯ ಪ್ರಾರಂಭದ ಹಂತದಲ್ಲಿ ಮಂಜೂರು ಮಾಡಲಾಗುವುದು.

ಈ) 2405 ಮನೆಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಇವುಗಳಲ್ಲಿ 1789 ಮನೆಗಳು ಪ್ರಗತಿಯಲ್ಲಿದ್ದು, 83 ಮನೆಗಳು ಮುಕ್ತಾಯ ಹಂತದಲ್ಲಿದೆ.

ಉ) ಮನೆಗಳ ಮಂಜೂರಾತಿ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಲಾಗಿದೆ.

ಊ) ಹೌದು.

ಅನುಬಂಧ-1

District wise abstract of 100 housing projects

Sl. No.	District	Place	Total No.of Places	No. of Sites	No. of Houses
1	Bagalkot	Jamakhandi	1+0	339	53
		Total	**1**	**339**	**53**
		Kuvempunagar		16	0
		Tilaknagar	3+1	9	22
2	Bellary	Hospet		6	14
		Sandur		180	0
		Total	**4**	**211**	**36**
		Hanchinala		87	76
		Bijapur KHB Land		shopping complex	
3	Bijapur	Indi	4+2	117	12
		Muddebihal		96	250
		KIADB Land		2550	50
		Itanigal		1080	0
		Total	**6**	**3930**	**388**
		Nippani		80	49
		Sankeshwar		43	87

Sl. No.	District	Place	Total No.of Places	No. of Sites	No. of Houses
		Athani		233	0
		Kanbargi		543	4
4	Belgaum	Hukkeri	5+4	38	0
		Gokak		50	0
		Hindalga		120	0
		Athani		193	0
		Saundatti			
		Total	**9**	**1300**	**140**
		Channapatna		463	0
		Allalsandra		416	0
5	Bangalore (U)	Kengeri	0+5	200	0
		Iglur Bannahalli			
		Hoskote			
		Total	**5**	**1079**	**0**
		Anthasarnahalli		12	32
		Marlur		527	0
		Shettyhalli	3+2	110	
6	Tumkur	HMT Land		180	20
		Madugiri		155	0
		Total	**5**	**984**	**52**
		Naubad		102	165
7	Bidar	Chitaguppa	3+1	12	10
		Humnabad		94	0
		Basavaklyan		300	0
		Total	**4**	**508**	**175**
		Holakere		60	0
8	Chitradurga	Hosadurga	3+0	338	0
		Kelakote		418	0
		Total	**3**	**816**	**0**
		Sy. No. 528		111	0
9	Chikkmaglur	GLSR Land	4+0	27	0
		5th Phase		663	0
		Koppa		83	0
		Total	**4**	**884**	**0**

Sl. No.	District	Place	Total No.of Places	No. of Sites	No. of Houses
		Santoshnagar		3	11
		Sattur Layout		0	4
		Gamangatti		725	80
		Hangal		57	50
		Amargol		248	0
10	Dharwad	Lakmanahalli	4+6	600	20
		DN Koppa		880	20
		Lakkamanahalli		80	0
		Annigeri		108	0
		Kalgatgi		109	0
		Total	**10**	**2810**	**185**
		Harapanahalli		51	35
		Jaglur		62	11
11	Davanagere	Nittuvalli (KHB Land)	3+1	Shopping Complex	
		Harihar		1114	0
		Total	**4**	**1227**	**46**
		Kankandi		35	170
		Kunjatbail		23	70
		Padavu		19	40
		Ullalsomeshwara		75	0
12	Dakshina Kannada	Thiruvail	7+2	94	0
		Shivalli		53	0
		Kudupu		215	0
		Samethadke		45	0
		Amtadi		108	0
		Total	**9**	**667**	**280**
		Revenue Employee		25	323
		NWKSTC		7	263
13	Gadag	Laxmeshwara	3+2	170	0
		Kalsapur		3450	150
		Hulikoti			
		Total	**5**	**3652**	**736**

Sl. No.	District	Place	Total No.of Places	No. of Sites	No. of Houses
		Chincoli		56	92
		Vokkalgere		108	186
		Gurumitkal		34	17
14	Gulbarga	Shorapur	0+6	16	6
		Jewargi		200	0
		Airport Land		3450	150
		Total	**6**	**3864**	**451**
		Alur		46	0
		Arkalgud		44	0
15	Hassan	Channapatna Tank Bed	2+1		
		Total	**3**	**90**	**0**
		Chikkmandya		1169	179
16	Mandya	Mandya Town	2+1	12	47
		KR Pet		100	0
		Total	**3**	**1281**	**226**
		T. Narasipura		0	114
		Bannur		90	0
17	Mysore	Nanjangud	1+3	300	0
		Periyapatna			
		Total	**4**	**390**	**114**
		Askihal		166	47
18	Raichur	Sindanur	2+0	20	24
		Total	**2**	**186**	**71**
		Sagar		51	16
19	Shimoga	Gopishettykoppa	3+0	466	155
		Badravathi		73	0
		Total	**3**	**590**	**171**
		Landakanahalli		152	25
		Haliyal		100	0
		Ankola		26	0

Sl. No.	District	Place	Total No.of Places	No. of Sites	No. of Houses
20	Uttara Kannada	Mundgod	2+4	22	0
		Yelapura		23	0
		Landakanahalli (Sirsi)			
		Total	**6**	**323**	**25**
		Kumbashi		27	2
21	Udupi	Hebri	2+0	0	15
		Total	**2**	**27**	**17**
		Gundulpet	1		
22	Chamarajnagar	Total	1		
		Total	**99**	**25158**	**3166**

ಅನುಬಂಧ-2

ಕರ್ನಾಟಕ ಗೃಹ ಮಂಡಳಿಗೆ ನಿವೇಶನ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ
(ಜಿಲ್ಲಾವಾರು ವಿವರ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಿವೇಶನ ಕೋರಿ ಬಂದಿರುವ ಅರ್ಜಿ ಸಂಖ್ಯೆ
1	2	3
1	ಬಾಗಲಕೋಟೆ	666
2	ಬೆಂಗಳೂರು (ಗ್ರಾಮಾಂತರ)	2111
3	ಬೆಂಗಳೂರು (ನಗರ)	5449
4	ಬೆಳಗಾವಿ	2924
5	ಬಳ್ಳಾರಿ	113
6	ಬೀದರ್	1115
7	ಬಿಜಾಪುರ	3520
8	ಚಾಮರಾಜನಗರ	237
9	ಚಿಕ್ಕಮಗಳೂರು	225
10	ಚಿತ್ರದುರ್ಗ	446
11	ದಕ್ಷಿಣ ಕನ್ನಡ	319
12	ದಾವಣಗೆರೆ	421
13	ಧಾರವಾಡ	1734
14	ಗದಗ	528
15	ಗುಲ್ಬರ್ಗಾ	1250

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಿವೇಶನ ಕೋರಿ ಬಂದಿರುವ ಅರ್ಜಿ ಸಂಖ್ಯೆ
16	ಹಾಸನ	773
17	ಹಾವೇರಿ	405
18	ಕೊಡಗು	430
19	ಕೋಲಾರ	980
20	ಕೊಪ್ಪಳ	1860
21	ಮಂಡ್ಯ	1860
22	ಮೈಸೂರು	1345
23	ರಾಯಚೂರು	125
24	ಶಿವಮೊಗ್ಗ	305
25	ತುಮಕೂರು	368
26	ಉಡುಪಿ	94
27	ಉತ್ತರ ಕನ್ನಡ	496
	ಒಟ್ಟು	28353

ನರ್ಸಿಂಗ್ ಹೋಂ ಸ್ಥಾಪನೆಗೆ ಪರವಾನಗಿ

328 (492) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) - ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಸಗಿ ಆಸ್ಪತ್ರೆ, ಕ್ಲಿನಿಕ್, ನರ್ಸಿಂಗ್ ಹೋಂ ಸ್ಥಾಪಿಸಲು ಇರುವ ನಿಯಮ ಮತ್ತು ಮಾನದಂಡಗಳೇನು ;

ಆ) ಈ ನಿಯಮಗಳನ್ನು ಅನುಸರಿಸಲಾಗುತ್ತಿದೆಯೇ ;

ಇ) ಇವುಗಳನ್ನು ಪ್ರಾರಂಭಿಸಲು ಸರ್ಕಾರದ ಅನುಮತಿ ಅಗತ್ಯವೇ ; ಇದನ್ನು ಕಡ್ಡಾಯಗೊಳಿಸಲು ಕಾಯಿದೆ ರೂಪಿಸಲಾಗಿದೆಯೇ ;

ಈ) ಸರ್ಕಾರ ಪರವಾನಗಿ ನೀಡಲು ಅನುಸರಿಸುವ ಕ್ರಮಗಳೇನು ;

ಉ) ಈ ನಿಟ್ಟಿನಲ್ಲಿ ಗುಣಮಟ್ಟ ಮಾನ್ಯತಾ ಸಮಿತಿ ರಚಿಸಲಾಗುವುದೇ ;

ಊ) ಯಾವಾಗಿನಿಂದ ಈ ಕ್ರಮ ಜಾರಿಯಾಗುವುದು ; (ವಿವರ ಒದಗಿಸಿ) ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಂ ನಿಯಮಗಳು 1976 ರಲ್ಲಿರುವ ಅನುಸೂಚಿ 1 ಮತ್ತು 2 ರಲ್ಲಿರುವ ಮಾನದಂಡಕ್ಕೆ ಅನುಗುಣವಾಗಿ ನರ್ಸಿಂಗ್ ಹೋಂಗಳು ಇರಬೇಕಾಗಿರುತ್ತದೆ ಆದರೆ ನಿಯಮಗಳು ಜಾರಿ ಆಗಿರುವುದಿಲ್ಲ.

ಆ) ಇಲ್ಲ

ಇ) ಪ್ರಸ್ತುತದಲ್ಲಿ ಈ ಕಾಯಿದೆ ಜಾರಿಯಲ್ಲಿ ಇಲ್ಲದೆ ಇರುವುದರಿಂದ ಅನುಮತಿ ಪಡೆಯಲಾಗುತ್ತಿಲ್ಲ.

ಈ) ಉದ್ಭವಿಸುವುದಿಲ್ಲ